ಪರಮ ದಯಾಮಯನೂ ಕರುಣಾನಿಧಿಯೂ ಆದ ಅಲ್ಲಾಹನ ನಾಮದಿಂದ

# ಪವಿತ್ರ ಕುರ್‌ಆನ್ ಎಂದರೇನು?



ಪವಿತ್ರ ಕುರ್‌ಆನ್ ಸರ್ವಲೋಕಗಳ ಸೃಷ್ಟಿಕರ್ತನಾದ ಅಲ್ಲಾಹನ ವಚನವಾಗಿದೆ. ಅವನು ಅದನ್ನು ಅಂತಿಮ ಪ್ರವಾದಿ ಮುಹಮ್ಮದ್(ಸ) ರಿಗೆ ಅವತೀರ್ಣಗೊಳಿಸಿದನುಅವರು ಮಾನವರಿಗೆ ಅವರನ್ನು ಸೃಷ್ಟಿಸಿದ ಪರಮೋಚ್ಛ ಉದ್ದೇಶವನ್ನು ಸ್ಪಷ್ಟವಾಗಿ ವಿವರಿಸಲು, ಇಹಲೋಕ ಮತ್ತು ಪರಲೋಕದಲ್ಲಿ ಅವರಿಗೆ ನೀಡಲಾಗುವ ಸೌಭಾಗ್ಯಗಳ ಕಡೆಗೆ ಅವರಿಗೆ ಮಾರ್ಗದರ್ಶನ ಮಾಡಲು ಮತ್ತು ಮರಣಾನಂತರದ ಶಾಶ್ವತ ದೌರ್ಭಾಗ್ಯದಿಂದ ಅವರನ್ನು ರಕ್ಷಿಸಲು ಪವಿತ್ರ ಕುರ್‌ಆನ್ ಅನ್ನು ಅವತೀರ್ಣಗೊಳಿಸಲಾಗಿದೆ ಇದು ಕಟ್ಟಕಡೆಯದಾಗಿ ಅವತೀರ್ಣವಾದ ದೈವಿಕ ಗ್ರಂಥವಾಗಿದ್ದು ಇದಕ್ಕಿಂತ ಮುಂಚೆ ಅವತೀರ್ಣವಾದ ದೈವಿಕ ಗ್ರಂಥಗಳನ್ನು ಇದು ದೃಢೀಕರಿಸುತ್ತದೆ ಮತ್ತು ಅವುಗಳಲ್ಲಿರುವ ಧರ್ಮ ನಿಯಮಾವಳಿಗಳನ್ನು ರದ್ದುಗೊಳಿಸುತ್ತದೆ ಪವಿತ್ರ ಕುರ್‌ಆನ್ ಶಾಶ್ವತವಾಗಿ ನೆಲೆನಿಲ್ಲುವ ಪವಾಡವಾಗಿದೆ ಮತ್ತು ಅದು ಮುಹಮ್ಮದ್(ಸ) ರವರ ಪ್ರವಾದಿತ್ವಕ್ಕೆ ಪುರಾವೆಯಾಗಿದೆ. ಪವಿತ್ರ ಕುರ್‌ಆನ್‌ನಂತಿರುವ ಒಂದು ಗ್ರಂಥವನ್ನು ರಚಿಸಿ ತರಲು, ಕನಿಷ್ಟಪಕ್ಷ ಅದರ ಅಧ್ಯಾಯದಂತಿರುವ ಒಂದು ಅಧ್ಯಾಯವನ್ನಾದರೂ ರಚಿಸಿ ತರಲು ಅಲ್ಲಾಹು ಮನುಷ್ಯರಿಗೆ ಮತ್ತು ಜಿನ್ನ್ (ಅಗೋಚರ ಜೀವಿಗಳು) ಗಳಿಗೆ ಸವಾಲು ಹಾಕಿದ್ದಾನೆ. ಆದರೆ ಇಂದಿನ ತನಕ ಅವರಲ್ಲಿ ಯಾರೂ ಈ ಸವಾಲನ್ನು ಸ್ವೀಕರಿಸುವಲ್ಲಿ ಯಶಸ್ವಿಯಾಗಿಲ್ಲ.

ಪವಿತ್ರ ಕುರ್‌ಆನ್ ಅವತೀರ್ಣವಾಗಿ 1400 ಕಿಂತ ಹೆಚ್ಚು ವರ್ಷಗಳು ಕಳೆದರೂ ಅದರಲ್ಲಿ ಒಂದೇ ಒಂದು ತಿದ್ದುಪಡಿ ಮತ್ತು ಬದಲಾವಣೆ ಮಾಡಲು ಯಾರಿಗೂ ಸಾಧ್ಯವಾಗಿಲ್ಲ. ಅದು ಅವತೀರ್ಣವಾದ ಮೂಲ ಅರಬ್ಬಿ ಭಾಷೆಯಲ್ಲೇ ಅದು ಸುರಕ್ಷಿತವಾಗಿ ಉಳಿಯಲಿದೆ. ಅಂತ್ಯದಿನದ ತನಕ ಅದನ್ನು ಸಂರಕ್ಷಿಸುವ ಹೊಣೆಯನ್ನು ಸ್ವತಃ ಸರ್ವಶಕ್ತನಾದ ಅಲ್ಲಾಹನೇ ವಹಿಸಿಕೊಂಡಿದ್ದಾನೆ.

ಪವಿತ್ರ ಕುರ್‌ಆನ್ ಇಸ್ಲಾಮ್ ಧರ್ಮದ ಮೂಲಭೂತ ಆಧಾರವಾಗಿದೆ. ಅದು ಎಲ್ಲಾ ಕಾಲಗಳಲ್ಲೂ, ಸ್ಥಳಗಳಲ್ಲೂ ಮಾನವ ಜೀವನವನ್ನು ವ್ಯವಸ್ಥಿತಗೊಳಿಸುವ ಮತ್ತು ತೀರ್ಪು ನೀಡುವ ಸಂವಿಧಾನವಾಗಿದೆ. ಅದು ಏಕೈಕ ಸೃಷ್ಟಿಕರ್ತನ ಆರಾಧನೆಯ ಕಡೆಗೆ ಆಮಂತ್ರಿಸುತ್ತದೆ. ಅದು ಮನುಷ್ಯನನ್ನು ಸೃಷ್ಟಿಸಿದ ದೇವನ ಬಗ್ಗೆ, ಅವನ ಧರ್ಮದ ಬಗ್ಗೆ, ಪ್ರಪಂಚದ ಆರಂಭದ ಬಗ್ಗೆ, ಮನುಷ್ಯ ಸೃಷ್ಟಿಯ ವಿವಿಧ ಘಟ್ಟಗಳ ಬಗ್ಗೆ ತಿಳಿಸುತ್ತದೆ. ಈಗಾಗಲೇ ಸಂಭವಿಸಿದ ಮತ್ತು ಭವಿಷ್ಯದಲ್ಲಿ ಸಂಭವಿಸಲಿರುವ ಘಟನೆಗಳ ಬಗ್ಗೆ ತಿಳಿಸುತ್ತದೆ. ಪೂರ್ವ ಪ್ರವಾದಿಗಳ ಬಗ್ಗೆ, ಅಲ್ಲಾಹು ಅವರಿಗೆ ನೀಡಿದ ಸಹಾಯದ ಬಗ್ಗೆ ಮತ್ತು ಅವರ ವಿರೋಧಿಗಳನ್ನು ನಾಶ ಮಾಡಿದ ಬಗ್ಗೆ ತಿಳಿಸುತ್ತದೆ. ಅದರಲ್ಲಿ ಮೂಲ ಆರಾಧನೆಗಳ ಬಗ್ಗೆ, ವ್ಯವಹಾರಗಳ ಬಗ್ಗೆ ವಿವರಣೆಗಳಿವೆ. ಅದು ಅತ್ಯುತ್ತಮ ಗುಣಸ್ವಭಾವದ ಕಡೆಗೆ ಆಮಂತ್ರಿಸುತ್ತದೆ ಮತ್ತು ಕೆಟ್ಟ ಗುಣಸ್ವಭಾವಗಳ ಬಗ್ಗೆ ಎಚ್ಚರಿಕೆ ನೀಡುತ್ತದೆ. ಪರಲೋಕದ ಅಂತಿಮ ನೆಲೆಯ ಬಗ್ಗೆ - ಅಂದರೆ ಸತ್ಯವಿಶ್ವಾಸಿಗಳ ನೆಲೆಯಾದ ಸ್ವರ್ಗ ಮತ್ತು ಅತಿರೇಕಿಗಳ ಹಾಗೂ ಸತ್ಯನಿಷೇಧಿಗಳ ನೆಲೆಯಾದ ನರಕಾಗ್ನಿಯ ಬಗ್ಗೆ ವಿವರಿಸುತ್ತದೆ.

ಪ್ರಿಯ ಓದುಗರೇ, ಅತ್ಯಧಿಕ ಪ್ರಾಮುಖ್ಯತೆಯಿರುವ ಈ ಗ್ರಂಥವನ್ನು ಸರ್ವಶಕ್ತನಾದ ಅಲ್ಲಾಹು ಅರಬ್ಬಿ ಭಾಷೆಯಲ್ಲಿ ಅವತೀರ್ಣಗೊಳಿಸಿ, ಸಂಪೂರ್ಣ ಮಾನವಕುಲಕ್ಕೆ ಅದನ್ನು ತಲುಪಿಸಬೇಕೆಂದು ಆಜ್ಞಾಪಿಸಿರುವುದರಿಂದ, ಇದನ್ನು ಸುಲಭವಾಗಿ ಅರ್ಥಮಾಡಿಕೊಳ್ಳಲು ಮತ್ತು ಇದನ್ನು ಎಲ್ಲಾ ಮನುಷ್ಯರಿಗೂ ತಲುಪಿಸಬೇಕೆಂಬ ಆಜ್ಞೆಯನ್ನು ಪಾಲಿಸಲು, ಇದರ ಅರ್ಥಾನುವಾದವನ್ನು ನಿಮ್ಮದೇ ಭಾಷೆಯಲ್ಲಿ ನಿಮಗೆ ಅರ್ಪಿಸಲು ನಮಗೆ ಸಂತೋಷವಾಗುತ್ತದೆ. ಇದನ್ನು ಅತ್ಯುತ್ತಮವಾಗಿ ಅನುವಾದಗೊಳಿಸಲು ನಮ್ಮ ಅನುವಾದಕರು ಗರಿಷ್ಠ ಪರಿಶ್ರಮಿಸಿದ್ದಾರೆ. ಆದರೆ ಅನುವಾದವು ಎಷ್ಟೇ ಕರಾರುವಾಕ್ಕಾಗಿದ್ದರೂ ಪವಿತ್ರ ಕುರ್‌ಆನ್ ಎಂಬ ಈ ಪವಾಡ ಗ್ರಂಥದ ಸಂಪೂರ್ಣ ಸಾರವನ್ನು ಮನುಷ್ಯ ಪ್ರಯತ್ನದ ಮೂಲಕ ಯಾವುದೇ ಭಾಷೆಯಲ್ಲೂ ಪ್ರತಿಬಿಂಬಿಸಲು ಖಂಡಿತ ಸಾಧ್ಯವಿಲ್ಲ. ಪವಿತ್ರ ಕುರ್‌ಆನಿನ ಸಂಪೂರ್ಣ ಸಾರವನ್ನು ಹೀರಲು ಬಯಸುವವರಿಗೆ ನಾವು ಪವಿತ್ರ ಕುರ್‌ಆನ್ ಅವತೀರ್ಣವಾದ ಅರಬ್ಬಿ ಭಾಷೆಯನ್ನು ಕಲಿಯಲು ಸಲಹೆ ನೀಡುತ್ತೇವೆ.

ಸಂದೇಶವಾಹಕರ ಮೇಲೆ ಶಾಂತಿಯಿರಲಿ. ಸರ್ವಸ್ತುತಿಗಳು ಸರ್ವಲೋಕಗಳ ಒಡೆಯನಾದ ಅಲ್ಲಾಹನಿಗೆ ಮೀಸಲು.


ಪವಿತ್ರ ಕುರ್‌ಆನ್ ವಿಶ್ವಕೋಶ

*ಅನುವಾದವನ್ನು ಉತ್ತಮಗೊಳಿಸಲು ನಿಮ್ಮ ಸಲಹೆ-ಸೂಚನೆಗಳನ್ನು ನಾವು ಸ್ವಾಗತಿಸುತ್ತೇವೆ. ಸಲಹೆ-ಸೂಚನೆ ನೀಡಲು ಬಯಸುವವರು ಪವಿತ್ರ ಕುರ್‌ಆನ್ ವಿಶ್ವಕೋಶ ಜಾಲತಾಣದಲ್ಲಿ

**(www.quranenc.com)**

ಪ್ರತಿಯೊಂದು ಕುರ್‌ಆನ್ ಸೂಕ್ತಿಯ ಮುಂಭಾಗದಲ್ಲಿರುವ ಸೂಚನೆ ಪೆಟ್ಟಿಗೆಯ ಮೂಲಕ ನೀಡಬಹುದು ನಮ್ಮನ್ನು ಸಂಪರ್ಕಿಸಲು ಬಯಸುವವರು ಇಮೇಲ್ ಮೂಲಕ ಸಂಪರ್ಕಿಸಬಹುದು:

**info@quranenc.com**

موسوعة القرآن الكريم

QuranEnc.com

**www.islamHouse.com**